ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ವಾಣಿ    ದಿನಾಂಕ : DATE : 28/6/19

# ಸಂಸತ್‌ನಲ್ಲಿ ಆರು ಮಸೂದೆ ಮಂಡನೆ

## ಲೋಕಸಭೆಯಲ್ಲಿ 2, ರಾಜ್ಯಸಭೆಯಲ್ಲಿ 1 ತಿದ್ದುಪಡಿಗೆ ಅನುಮೋದನೆ

**ನವದೆಹಲಿ:** ಲೋಕಸಭೆಯಲ್ಲಿ ಐದು, ರಾಜ್ಯಸಭೆಯಲ್ಲಿ ಒಂದು ಮಸೂದೆ ಗುರುವಾರ ಮಂಡನೆಯಾಯಿತು. ವಿ.ವಾ. 28/6/19

ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವ ರಮೇಶ್ ಪೋಖ್ರಿಯಾಲ್ ನಿಶಾಂತ್ ಕೇಂದ್ರೀಯ ಶೈಕ್ಷಣಿಕ ಸಂಸ್ಥೆಗಳು (ಉಪನ್ಯಾಸಕರ ವಿಭಾಗದಲ್ಲಿ ಮೀಸಲಾತಿ) ಮಸೂದೆ ಮಂಡಿಸಿದರೆ, ಆರೋಗ್ಯ ಸಚಿವ ಹರ್ಷವರ್ಧನ್ ಭಾರತೀಯ ವೈದ್ಯಕೀಯ ಮಂಡಳಿ (ತಿದ್ದುಪಡಿ) ಮಸೂದೆ ಮತ್ತು ಡೆಂಟಿಸ್ಟ್ (ತಿದ್ದುಪಡಿ) ಮಸೂದೆ ಮಂಡನೆ ಮಾಡಿದರು. ಆಧಾರ್ ಮತ್ತಿತರ ಕಾನೂನು(ತಿದ್ದುಪಡಿ) ಮಸೂದೆಯನ್ನು ಕಾನೂನು ಸಚಿವ ರವಿಶಂಕರ್ ಪ್ರಸಾದ್ ಮಂಡಿಸಿದರು. ಆಯುಷ್ ಸಚಿವ ಶ್ರೀಪಾದ ನಾಯ್ಕ್ ಮಂಡಿಸಿದ ಹೋಮಿಯೋಪಥಿ ಕೇಂದ್ರೀಯ ಮಂಡಳಿ (ತಿದ್ದುಪಡಿ) ಮಸೂದೆ, ವಾಣಿಜ್ಯ ಸಚಿವ ಪಿಯೂಷ್ ಗೋಯೆಲ್ ಮಂಡಿಸಿದ ವಿಶೇಷ ಆರ್ಥಿಕ ವಲಯ( ತಿದ್ದುಪಡಿ) ಮಸೂದೆಗೆ ಲೋಕಸಭೆ ಅನುಮೋದನೆ ನೀಡಿತು. ರಾಜ್ಯಸಭೆಯಲ್ಲಿ ಮಂಡಿಸಲಾದ ಎಸ್‌ಇಝೆಡ್ (ತಿದ್ದುಪಡಿ) ಮಸೂದೆಗೂ ಅಂಗೀಕಾರ ದೊರೆಯಿತು.

**ವಿಪ್ ಜಾರಿ:** ರಾಜ್ಯಸಭೆಯಲ್ಲಿ ಮಹತ್ವದ ಮಸೂದೆಗಳು ಚರ್ಚೆಗೆ ಬರುತ್ತಿರುವ ಹಿನ್ನಲೆಯಲ್ಲಿ ಕಾಂಗ್ರೆಸ್ ತನ್ನ ಸಂಸದರಿಗೆ ವಿಪ್ ಜಾರಿ ಮಾಡಿದೆ. ಬಿಜೆಪಿ ಬುಧವಾರವೇ ವಿಪ್ ಜಾರಿ ಮಾಡಿತ್ತು.

**ಇಸ್ರೋ ಜತೆ ಚರ್ಚೆ:** ಚಂದ್ರಯಾನ-2 ರಾಕೆಟ್ ಉಡಾವಣೆ ವೀಕ್ಷಿಸಲು ಸಂಸದರಿಗೂ ಅವಕಾಶ ನೀಡಬೇಕು ಎಂದು ಹಲವು ಸದಸ್ಯರು ರಾಜ್ಯಸಭೆಯಲ್ಲಿ ಒತ್ತಾಯಿಸಿದ್ದಾರೆ. ಈ ಬಗ್ಗೆ ಇಸ್ರೋ ಜತೆ ಚರ್ಚಿಸುವುದಾಗಿ ಸರ್ಕಾರ ತಿಳಿಸಿದೆ. ಭಾರತದ ಅತ್ಯಂತ ಮಹತ್ವಾಕಾಂಕ್ಷೆಯ ಚಂದ್ರಯಾನ-2 ಆಂಧ್ರ ಪ್ರದೇಶದ ಶ್ರೀಹರಿಕೋಟಾದಿಂದ ಜುಲೈ 15ರಂದು ಉಡಾವಣೆಯಾಗಲಿದೆ.

**ಮುಂದಿನ ವರ್ಷಕ್ಕೆ ಎಲ್ಲ ಗ್ರಾಪಂಗೂ ಬ್ರಾಡ್‌ಬ್ಯಾಂಡ್:** 2020ಕ್ಕೆ ಎಲ್ಲ ಗ್ರಾಮ ಪಂಚಾಯಿತಿಗಳಿಗೂ ಬ್ರಾಡ್‌ಬ್ಯಾಂಡ್ ಸೇವೆ ಕಲ್ಪಿಸುವುದಾಗಿ ಸರ್ಕಾರ ರಾಜ್ಯಸಭೆಗೆ ತಿಳಿಸಿದೆ. 2ನೇ ಹಂತದ ಭಾರತ್‌ನೆಟ್ ಯೋಜನೆ ಅನುಷ್ಠಾನವಾಗುತ್ತಿದ್ದು, ಎರಡು ಲಕ್ಷ ಗ್ರಾಮ ಪಂಚಾಯಿತಿಗಳಿಗೆ ಹೈಸ್ಪೀಡ್ ಇಂಟರ್‌ನೆಟ್ ಸೇವೆಯನ್ನು 2020ರ ಮಾರ್ಚ್ ಹೊತ್ತಿಗೆ ಒದಗಿಸಲಾಗುವುದು ಎಂದು ದೂರಸಂಪರ್ಕ ಸಚಿವ ರವಿಶಂಕರ್ ಪ್ರಸಾದ್ ಹೇಳಿದ್ದಾರೆ.

### ಉಪಾಹಾರ ಯೋಜನೆ ಇಲ್ಲ

ಮಧ್ಯಾಹ್ನದ ಬಿಸಿಯೂಟ ಯೋಜನೆಯಲ್ಲಿ ಬೆಳಗಿನ ಉಪಾಹಾರವನ್ನು ಆರಂಭಿಸುವಂತಹ ಯಾವುದೇ ಪ್ರಸ್ತಾವ ಸರ್ಕಾರದ ಮುಂದಿಲ್ಲ ಎಂದು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವ ರಮೇಶ್ ಕೋಖ್ರಿಯಾಲ್ ರಾಜ್ಯಸಭೆಗೆ ತಿಳಿಸಿದ್ದಾರೆ.

### ಸ್ತ್ರೀಯರ ಉಚಿತ ಪ್ರಯಾಣಕ್ಕೆ ತಿರಸ್ಕಾರ






ದೆಹಲಿ ಮೆಟ್ರೋದಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ವ್ಯವಸ್ಥೆ ಒದಗಿಸುವ ಆಮ್ ಆದ್ಮಿ ಪಕ್ಷದ ಸರ್ಕಾರದ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರ ತಿರಸ್ಕರಿಸಿದೆ. ಲೋಕಸಭೆಯಲ್ಲಿ ಈ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ವಸತಿ ಮತ್ತು ನಗರಾಭಿವೃದ್ಧಿ ಸಚಿವ ಹರ್ದೀಪ್ ಸಿಂಗ್ ಪುರಿ, ಮೆಟ್ರೋದಲ್ಲಿ ಯಾರಿಗೂ ಉಚಿತ ಸೇವೆ ಒದಗಿಸುವ ಉದ್ದೇಶ ಕೇಂದ್ರಕ್ಕಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

7